# 'ಏನೇ ಮಾಡಿದರೂ...'

ಮೊನ್ನೆ ಬೆಳಗಿನ ವಾಯು ಸಂಚಾರದ ಸಮಯದಲ್ಲಿ ಹಿರಿಯರೊಬ್ಬರು ತಮ್ಮ ಜೊತೆಯವರೊಂದಿಗೆ ಆಡುತ್ತಿದ್ದ ಮಾತು ಕಿವಿಗೆ ಬಿತ್ತು. ಅವರೆನ್ನುತ್ತಿದ್ದರು: 'ನೀವು ಏನೇ ಮಾಡಿದ್ರೂ, ಎಷ್ಟೇ ವಾಕಿಂಗ್ ಮಾಡಿದ್ರೂ ಯುವಕರಾಗೋಕೆ ಸಾಧ್ಯಾನೇ ಇಲ್ಲ.' ಈ ಮಾತು ಒಂದು ಕ್ಷಣ ನನ್ನನ್ನು ತಡೆದು ನಿಲ್ಲಿಸಿತು. ವಯಸ್ಸಾಗಿರುವಾತ ಕಾಲಚಕ್ರವನ್ನು ಹಿಂದಕ್ಕೆ ತಿರುಗಿಸಿ ಯುವಕನಾಗಲು ಸಾಧ್ಯವಿಲ್ಲ, ನಿಜ; ಆದರೆ ವಾಕಿಂಗ್ ಮಾಡುವ ಉದ್ದೇಶ ಯೌವನವನ್ನು ಪಡೆಯುವುದಲ್ಲವಷ್ಟೆ? ಆರೋಗ್ಯವನ್ನು ಉಳಿಸಿಕೊಳ್ಳುವುದು ಅಥವಾ ಗಳಿಸಿಕೊಳ್ಳುವುದು ಅದರ ನಿಜವಾದ ಉದ್ದೇಶ. ಸತ್ಯವನ್ನು ಮರೆಗಿರಿಸಿ, ಭ್ರಾಂತಿಯನ್ನು ಹುಟ್ಟಿಸಿ, ಗಲಿಬಿಲಿಗೊಳಿಸುವ ಇಂಥ ಮಾತುಗಳು ತುಂಬ ಅಪಾಯಕಾರಿಗಳೆಂಬುದನ್ನು ನಾವು ಗಮನಿಸಬೇಕು. 'ಏನೇ ಮಾಡಿದರೂ ಈ ವ್ಯವಸ್ಥೆಯನ್ನ ಬದಲಾಯಿಸೋದಕ್ಕೆ ಆಗೋದಿಲ್ಲ' 'ಏನೇ ಮಾಡಿದರೂ ನಮ್ಮ ಜನಕ್ಕೆ ಬುದ್ಧಿ ಬರೋಲ್ಲ' 'ಏನೇ ಮಾಡಿದರೂ ನೀನು ಈ ಜನ್ಮದಲ್ಲಿ ಉದ್ಧಾರವಾಗೋದಿಲ್ಲ' –ಇಂಥ ಮಾತುಗಳನ್ನು ನಾವು ಪದೇ ಪದೇ ಕೇಳುತ್ತಲೇ ಇರುತ್ತೇವೆ. ಲೋಕಾಭಿರಾಮದ ಧಾಟಿಯಲ್ಲಿರುವ ಈ ಮಾತುಗಳು ಯಾವ ಆಲೋಚನೆ, ಚಿಂತನೆ, ವಿಚಾರಗಳ ಹಿನ್ನೆಲೆಯಿಲ್ಲದೆ 'ಮಾತಿಗಾಗಿ ಮಾತು' ಎಂಬ ನೆಲೆಯಿಂದ ಹೊಮ್ಮುವ 'ನಿರರ್ಥಕ' ವಾಕ್ಯಗಳು. 'ಏನೇ ಮಾಡಿದರೂ..' ಎಂದು ರಾಗವೆಳೆಯುವ ಇಂಥ ಮಾತುಗಳು ಮಾತಾಡುವವನ ಮನಸ್ಥಿತಿಯನ್ನು ಪ್ರಕಟಿಸುವುದು ಮಾತ್ರವಲ್ಲ, ಕೇಳುಗನಲ್ಲಿ ಇರಬಹುದಾದ ಜೀವನೋತ್ಸಾಹವನ್ನೂ ಕುಗ್ಗಿಸುತ್ತದೆ. ಈ ಮಾತುಗಳಲ್ಲಿ ಸೋಲಿನ ಮನೋಭಾವ ವಿರುತ್ತದೆ; ಅನೇಕಬಾರಿ ಜಡತೆ, ಮೈಗಳ್ಳತನ ಮುಂತಾದುವೂ ಕಾಣಿಸಿಕೊಳ್ಳುತ್ತವೆ. ಯಾವ ಕೆಲಸವನ್ನೂ ಮಾಡಲು ಪ್ರಯತ್ನಿಸದಿರುವವರು ಇಂಥ ಮಾತುಗಳನ್ನು ಗಟ್ಟಿಯಾಗಿ ಆಶ್ರಯಿಸುತ್ತಾರೆ. ವಿಘ್ನ ಸಂತೋಷಿಗಳಿಗೂ ಇಂಥವು ತುಂಬಾ ಪ್ರಿಯ. ಒಬ್ಬಾತ ಯಾವುದಾದರೂ ಕೆಲಸಕ್ಕೆ ಕೈ ಹಾಕಿದರೆ ವಿಘ್ನ ಸಂತೋಷಿಗಳು 'ಏನೇ ಮಾಡಿದರೂ ನಿನ್ನ ಕೈಯಲ್ಲಿ ಆ ಕೆಲಸ ಸಾಧ್ಯವಾಗಲಾರದು' ಎಂದು ಆ ಸಾಹಸಿಯ ಉತ್ಸಾಹಕ್ಕೆ ತಣ್ಣೀರೆರೆಯುತ್ತಾರೆ. ಇನ್ನೊಬ್ಬರ ಸಾಧನೆಯನ್ನು ಸಹಿಸದ ಅಸೂಯಾ ಪೀಡಿತರೂ ಸಾಧನೆಗೆ ಹೊರಟಾತನ ನಿಶ್ಚಯವನ್ನು ಅಲ್ಲಾಡಿಸುವುದು ಇಂಥ ಮಾತುಗಳಿಂದಲೇ.

ಮನುಷ್ಯ ಕೈಗೊಳ್ಳುವ ಕೆಲಸಗಳನ್ನು ಸ್ಥೂಲವಾಗಿ– ಸುಲಭ ಸಾಧ್ಯ, ಸಾಧ್ಯ, ಕಷ್ಟ ಸಾಧ್ಯ, ಅಸಾಧ್ಯ ಎಂಬ ಗುಂಪುಗಳಲ್ಲಿ ವಿಂಗಡಿಸಬಹುದು. 'ಏನೇ ಮಾಡಿದರೂ...' ಎನ್ನುವ 'ನೇತಿವಾದಿಗಳು' ಮೊದಲೆರಡು ಗುಂಪುಗಳಿಗೆ ಸೇರಿದ ಕೆಲಸಗಳಿಂದಲೂ ದೂರವಿರುತ್ತಾರೆ. ಕೆಲಸವನ್ನು ಕೈಗೆತ್ತಿಕೊಳ್ಳುವ ಮೊದಲೇ ಮುಂದೆ ಎದುರಾಗಬಹುದಾದ ತೊಂದರೆಗಳನ್ನು ಕಲ್ಪಿಸಿಕೊಂಡು 'ಅನಾರಂಭಶೂರರು' ಎನ್ನಿಸಿಕೊಳ್ಳುತ್ತಾರೆ. ಅಜೀರ್ಣವಾದೀತೆಂದು ಹೆದರಿ ಊಟವನ್ನೇ ಬೇಡವೆನ್ನುವ ಇಂಥವರನ್ನು ನಾವು ನೋಡುತ್ತಿರುತ್ತೇವೆ. ಯಾವುದೇ ಕೆಲಸ ಕೈಗೂಡಬೇಕಾದರೆ ಅದನ್ನು ಕೈಗೆತ್ತಿಕೊಂಡು, ಪ್ರಾರಂಭಿಸಬೇಕು ಎಂಬ ಪ್ರಾಥಮಿಕ ತಿಳಿವಳಿಕೆಯೂ ಇಂಥವರಿಗೆ ಇರುವುದಿಲ್ಲ. 'ಪ್ರಗತಿ' ಎಂದರೆ ಮುನ್ನಡೆಯುವಿಕೆ, ಇದ್ದ ಸ್ಥಿತಿಗಿಂತ ಉತ್ತಮ ಸ್ಥಿತಿಗೆ ಚಲಿಸುವಿಕೆ ಎಂಬುದು ಅರ್ಥ. 'ಏನೇ ಮಾಡಿದರೂ...' ಎಂಬ ನೇತಿಭಾವ ಪ್ರಗತಿಗೆ ಅತ್ಯಂತ ಮಾರಕ. ನೂರಾರು ಪುಟಗಳಿರುವ ಒಂದು ಗ್ರಂಥ ಪ್ರಾರಂಭವಾಗುವುದೇ ಮೊದಲ ಅಕ್ಷರದಿಂದ. ಅದರ ಲೇಖಕನಿಗೆ 'ಏನೇ ಮಾಡಿದರೂ...' ಎಂಬ ನಿರಾಶೆಯ ಭೂತವೇನಾದರೂ ಅಡ್ಡ ಬಂದಿದ್ದರೆ, ಇಡಿಯ ಗ್ರಂಥ ಖಾಲಿ ಹಾಳೆಗಳಿಂದಲೇ ತುಂಬಿರುವಂತಾಗುತ್ತಿಲ್ಲವೆ? ಗೊಮ್ಮಟೇಶ್ವರನ ಶಿಲ್ಪವನ್ನು ನಿರ್ಮಾಣ ಮಾಡಿದ ಶಿಲ್ಪಿ ಮೊದಲ ಚಾಣದ ಏಟನ್ನು ಹಾಕದಿದ್ದಿದ್ದರೆ, ಗೊಮ್ಮಟನ ಬದಲು ಕೇವಲ ಬಂಡೆಯೊಂದಿರುತ್ತಿತ್ತು. Trifles make perfection and perfrction is not trifle (ಸಣ್ಣ ಪುಟ್ಟ ಕೆಲಸಗಳಿಂದ ಪರಿಪೂರ್ಣತೆ ಉಂಟಾಗುತ್ತದೆ; ಆದರೆ ಪರಿಪೂರ್ಣತೆ ಎನ್ನುವುದು ಸಾಮಾನ್ಯವಲ್ಲ) ಎಂಬ ಮೈಕೇಲ್ ಎಂಜೆಲೋವಿನ ಮಾತನ್ನು ನೆನಪಿಸಿಕೊಳ್ಳಬೇಕು. ಹಿರಿಯರು ಹೇಳುತ್ತಾರೆ: ಯೋಜನಾನಾಂ ಸಹಸ್ರಂತು ಶನೈರ್ಯಾತಿ ಪಿಪೀಲಿಕಾ।

ಅಗಚ್ಛನ್ ವೈನತೇಯೋಪಿ ಪದಮೇಕಂ ನ ಗಚ್ಛತಿ॥

(ಇರುವೆ ಮೆಲ್ಲ ಮೆಲ್ಲಗೆ ಸಾವಿರ ಯೋಜನೆಗಳನ್ನೂ ಹೋಗುತ್ತದೆ. ಗರುಡನು ಒಂದು ಹೆಜ್ಜೆ ಮುಂದಿಡದೆ ಮುಂದೆ ಸಾಗಲಾರ)

■ ವೈನತೇಯ

# ಮಾತೇ ಮುತ್ತು

★ ಒಬ್ಬಂಟಿ ಆಗಿರುವವನೇ ಪ್ರಪಂಚದಲ್ಲಿ ಎಲ್ಲರಿಗಿಂತ ಬಲಶಾಲಿ.

–ಹೆನ್ರಿಕ್ ಇಬ್ಸನ್

★ ಹತ್ತು ಸಲ ಕಂಡದ್ದಕ್ಕೆ ಕಣ್ಣು ಒಗ್ಗುತ್ತದೆ. ಹತ್ತು ಸಲ ತಿಂದದ್ದಕ್ಕೆ ನಾಲಿಗೆ ಒಗ್ಗುತ್ತದೆ. ಮನುಷ್ಯ ಸ್ವಭಾವವೇ ಅಷ್ಟು.

–ತರಾಸು

★ ಚೆನ್ನಾಗಿರೋದನ್ನ ಚೆನ್ನಾಗಿದೆ ಅನ್ನಬೇಕಾದರೂ ಧೈರ್ಯ ಬೇಕು! ಚೆನ್ನಾಗಿಲ್ಲದ್ದನ್ನು ಚೆನ್ನಾಗಿಲ್ಲ ಅನ್ನಬೇಕಾಗಿದ್ದರೂ ಧೈರ್ಯ ಬೇಕು!

–ಎಲ್. ಬಸವರಾಜು

★ ಎಂಥ ತಿಳಿದವರಿದ್ದರೂ ಪ್ರಸಂಗವಶಾತ್ ಅವರಿಗೆ ನಾಲ್ಕು ಮಾತು ಹೇಳಲಿಕ್ಕೆ ಎರಡನೆಯವರು ಬೇಕಾಗುತ್ತದೆ.

–ಗಳಗನಾಥ

★ ಜಗತ್ತನ್ನು ಸರಿಪಡಿಸಲು ನಮ್ಮ ನಿಮ್ಮಿಂದ ಸಾಧ್ಯವಿಲ್ಲ. ಪ್ರಯತ್ನಿಸಿದರೆ ಸ್ವಲ್ಪ ಮಟ್ಟಿಗೆ ನಮ್ಮನ್ನು ನಾವು ತಿದ್ದಿಕೊಳ್ಳಬಹುದು.

–ಸ್ವಾಮಿ ಜಗದಾತ್ಮಾನಂದ

★ ಪರಸ್ಪರ ಮಾತನಾಡುವುದರಿಂದ, ಓದುವುದಕ್ಕಿಂತ ಹೆಚ್ಚು ಜ್ಞಾನ ಪಡೆಯಬಹುದು. ಮಾತನಾಡುವಾಗ ಮನಸ್ಸು ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ಓದುವುದಕ್ಕಿಂತ ಆಲೋಚಿಸುವುದು ಹೆಚ್ಚು ಮುಖ್ಯವಾದುದು.

–ಬಿ.ಆರ್. ಅಂಬೇಡ್ಕರ್

★ ಸಾರ್ವಜನಿಕ ಬದುಕಿನಲ್ಲಿ ತೊಡಗಿರುವ ಪ್ರತಿಯೊಬ್ಬನೂ ಟೀಕೆ, ವಿಮರ್ಶೆ, ತಮಾಷೆಯನ್ನು ಎದುರಿಸಲು ಸಿದ್ಧನಾಗಿರಬೇಕು.

–ಪಿ.ಲಂಕೇಶ್

★ ಹೊರಗಣ ಸ್ನೇಹಿತರು ಎಷ್ಟು ಸಹಾಯ ನೀಡಿದರೆ ಏನು? ಒಳಗಿನಿಂದ ಸತ್ವ ಇಲ್ಲದಿದ್ದರೆ ಹೊರಗಿನಿಂದ ಮಾಡುವ ಯಾವ ಸಹಾಯವೂ ಫಲಿಸಲಾರವು.

–ಡಿವಿಜಿ

★ ಎತ್ತರದ ಕೊಂಬೆಯಲ್ಲಿರುವ ಹಣ್ಣು ಕೈಗೆ ಸಿಗುವುದಿಲ್ಲ ಎಂಬ ಕಾರಣದಿಂದ ಕೈಗೆ ಎಟುಕುವಂತೆ ತಗ್ಗಿನಲ್ಲಿರುವ ಕೊಂಬೆಯ ಹಣ್ಣನ್ನು ಬೇಡ ಎನ್ನುವುದು ವಿವೇಕವಲ್ಲ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ನದಿಯಲ್ಲಿ ಬಿದ್ದದ್ದೆಲ್ಲ ಶುದ್ಧವಲ್ಲ, ಕಾಶಿ ಗಂಗೆಯಲ್ಲಿ ಹರಿದದ್ದೆಲ್ಲ ತೀರ್ಥವಲ್ಲ.

–ಸುಜನಾ

★ ವಯಸ್ಸಾದವರಿಗೆ ಉಪದೇಶ ಮಾಡಿ ಪ್ರಯೋಜನವಿಲ್ಲ. ಅವರು 'ತುಂಬಿದ ಚೀಲ' ಇದ್ದಂತೆ. ಬೇಡವಾದದ್ದನ್ನೆಲ್ಲ ತಲೆಯಲ್ಲಿ ತುಂಬಿಕೊಂಡಿರುತ್ತಾರೆ. ಇನ್ನು ಯುವಕ– ಯುವತಿಯರೋ 'ತೂತಿನ ಚೀಲ'ವಿದ್ದಂತೆ. ಹರಿದ ಚೀಲದಲ್ಲಿ ಎಷ್ಟೇ ತುಂಬಲು ಯತ್ನಿಸುವುದು ವ್ಯರ್ಥ ಪ್ರಯಾಸ. ನಾವು ಮಾಡುವ ಉಪದೇಶ ಸಾರ್ಥಕಗೊಳ್ಳಬೇಕಾದರೆ ಚಿಕ್ಕ ಮಕ್ಕಳನ್ನು ಆಯ್ಕೆ ಮಾಡಿಕೊಳ್ಳಬೇಕು. ಎಳೆಯ ಮಕ್ಕಳು 'ಖಾಲಿ ಚೀಲ' ಇದ್ದಂತೆ ಏನನ್ನಾದರೂ ತುಂಬಬಹುದು.

–ತರಳಬಾಳು ಶಿವಕುಮಾರ ಸ್ವಾಮೀಜಿ

★ ಸಿಕ್ಕಿ ಬೀಳದವರೇ ನಿಜವಾದ ಕಳ್ಳರು.

–ರಷ್ಯಾ ಗಾದೆ

★ ಉಜ್ಜದೆ, ಕತ್ತರಿಸದೆ, ಪಾಲಿಷ್ ಮಾಡದೆ ವಜ್ರ ಇಲ್ಲ. ಪರೀಕ್ಷೆಗೊಳಗಾಗದ ಪರಿಪೂರ್ಣ ಮನುಷ್ಯನಿಲ್ಲ.

–ಚೀನಾ ಗಾದೆ